O.S.No.:253/2020
P.W.:2

ಈ ದಿನ ದಿಃ02.09.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

<u>ಪಾಟೀ ಸವಾಲುಃ- ಪ್ರತಿವಾದಿಗಳ ಪರ ವಕೀಲರಾದ ಶ್ರೀ ಎಸ್.ವಿ.ವಿ ರವರಿಂದಃ-</u>

1. ಈ ದಾವೆಯನ್ನು ಮಹದೇವು ಎನ್ನುವವರು ಅವರ ಅಣ್ಣನ ವಿರುದ್ದ ಹೂಡಿರುತ್ತಾರೆ. ಈ ದಾವೆಯನ್ನು ವಾದಿಯು ಜಮೀನಿಗೆ ಸಂಬಂಧಿಸಿದಂತೆ ಹೂಡಿರುತ್ತಾರೆ. ಅದರ ಸರ್ವೆ ನಂಬರ್ ಮತ್ತು ವಿಸ್ತೀರ್ಣ ನನಗೆ ಹೇಳಲು ಬರುವುದಿಲ್ಲ. ನಾನು ವಾದಿ ಮತ್ತು ಪ್ರತಿವಾದಿಗಳ ಅತ್ತೆಯ ಮಗ ಎಂದರೆ ಸರಿ. ನನ್ನ ಮುಖ್ಯವಿಚಾರಣ ಪ್ರಮಾಣ ಪತ್ರದ ಸಂಗತಿಗಳನ್ನು ನಾನು ಹೇಳಿ ಬರೆಸಿಲ್ಲ ಎಂದರೆ ಸರಿ. ವಾದಿ ಮತ್ತು ಪ್ರತಿವಾದಿಗಳ ಕುಟುಂಬದಲ್ಲಿ ಅವರ ಆಸ್ತಿಗಳಿಗೆ ಸಂಬಂಧಿಸಿದಂತೆ ಏನೇನು ವ್ಯವಹಾರಗಳು ಆಗಿವೆ ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿ.

2. 20ವರ್ಷಗಳ ಹಿಂದೆಯೇ ವಾದಿಯ ಕುಟುಂಬದಲ್ಲಿ ಅವರ ಸಹೋದರರ ನಡುವೆ ವಿಭಾಗ ಪತ್ರದಡಿಯಲ್ಲಿ ವಿಭಾಗ ಮಾಡಿಕೊಂಡು ದಾವಾಸ್ವತ್ತುಗಳನ್ನು ಮತ್ತು ಇತರ ಸ್ವತ್ತುಗಳನ್ನು 6ನೇ ಪ್ರತಿವಾದಿಗೆ ಕೊಟ್ಟಿರುತ್ತಾರೆ ಎಂದರೆ ಸರಿ. ದಾವಾಸ್ವತ್ತುಗಳಲ್ಲಿ 6ನೇ ಪ್ರತಿವಾದಿಯೇ ಈಗ ಸ್ವಾ ಧೀನದಲ್ಲಿದ್ದುಕೊಂಡು ಉಳುಮೆ ಮಾಡುತ್ತಿದ್ದಾರೆ ಎಂದರೆ ಸರಿ. ದಾವಾಸ್ವತ್ತಿಗೆ ಸಂಬಂಧಿಸಿದ ಕಂದಾಯದ

O.S.No.:253/2020
P.W.:2

ದಾಖಲೆಗಳು ಸಹ 6ನೇ ಪ್ರತಿವಾದಿಯ ಹೆಸರಿಗೆ ಇವೆ ಎಂದರೆ ಸರಿ. ಸತ್ಯಸಂಗತಿಗಳು ಗೊತ್ತಿದ್ದರು ನಾನು ವಾದಿಗೆ ಸಹಾಯ ಮಾಡಲು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ- ಇಲ್ಲ.**

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸರಿ ಇದೆ,**

**(ರಾಧ.ಎಸ್)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಕನಕಪುರ.**